# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ಹಿರಿಯೂರು.

## ಸಿ.ಸಿ ಸಂಖ್ಯೆ: 1161/2024

| | | | |
|---|---|---|---|
| ಸಾಕ್ಷಿದಾರರ ಹೆಸರು | – | ಬಾಹುಬಲಿ ಎಂ ಪಡನಾಡ್ | ಸಿಡಬ್ಲ್ಯೂ-1 |
| ತಂದೆಯ/ಗಂಡನ ಹೆಸರು | – | ಮನೋಹರ್ | ಪಿಡಬ್ಲ್ಯೂ-1 |
| ವಯಸ್ಸು | – | 31 ವರ್ಷ | ಪ್ರ.ವ.ಬೋ ದಿನಾಂಕ:06.03.2025 |
| ಉದ್ಯೋಗ | – | ಪಿ ಎಸ್ ಐ ಅಬ್ಬಿನಹೊಳೆ ಪೊಲೀಸ್ ಠಾಣೆ | |
| ವಾಸ | – | ಅಬ್ಬಿನಹೊಳೆ | |

<u>**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ಯವರಿಂದ:-**</u>

ನಾನು **2023** ರಿಂದ ಇಲ್ಲಿಯವರೆಗೆ ಅಬ್ಬಿನಹೊಳೆ ಪೊಲೀಸ್ ಠಾಣೆಯಲ್ಲಿ, ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ:22.03.2024 ರಂದು ಸಂಜೆ 4.20 ಗಂಟೆ ಸಮಯದಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ಬ್ಯಾಡರಹಳ್ಳಿ ಗ್ರಾಮದಲ್ಲಿ ಮಮತ ಗಂಡ ಮನೋಹರ ಎಂಬ ಮಹಿಳೆ ತಮ್ಮ ಮನೆಯ ಮುಂಭಾಗ ಅಕ್ರಮವಾಗಿ ಮದ್ಯವನ್ನು ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದಾರೆ ಎಂದು ಖಚಿತ ಮಾಹಿತಿ ಬಂದಿರುತ್ತದೆ. ಸದರಿ ಮಾಹಿತಿಯನ್ನು ವರದಿ ತಯಾರಿಸಿ ಠಾಣಾಧಿಕಾರಿಯಾದ ಚಾಸಾ-10 ರವರಿಗೆ ನೀಡಿರುತ್ತೇನೆ. ನಂತರ ಚಾಸಾ-10 ರವರು ಪ್ರಕರಣವನ್ನು ದಾಖಲಿಸಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ವರದಿ ದೂರನ್ನು **ನಿಪಿ-1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-1(ಎ)** ಎಂದು ಗುರುತಿಸಲಾಯಿತು.

ನಂತರ ಅದೇ ದಿನ ನಾನು, ಚಾಸಾ-5 ರಿಂದ 7 ರವರು ಇಲಾಖಾ ವಾಹನದಲ್ಲಿ ಬ್ಯಾಡರಹಳ್ಳಿ ಗ್ರಾಮದ ಬಸ್ ನಿಲ್ದಾಣಕ್ಕೆ ಹೋಗಿರುತ್ತೇವೆ. ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಧಾಳಿಗೆ

ಸಹಕರಿಸಲು ನೋಟೀಸ್ ನೀಡಿ, ಕೇಳಿದಾಗ ಅವರು ಒಪ್ಪಿಕೊಂಡಿರುತ್ತಾರೆ. ಸಾಕ್ಷಿಯು ಸದರಿ ನೋಟೀಸ್ ನ್ನು **ನಿಪಿ–2** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ–2(ಎ)** ಎಂದು ಗುರುತಿಸಲಾಯಿತು. ನಂತರ ನಾವು ಮತ್ತು ಪಂಚರು ಸಂಜೆ 5.30 ಗಂಟೆಗೆ ಭಾತ್ಮಿ ಬಂದ ಸ್ಥಳಕ್ಕೆ ಹೋಗಿ ನೋಡಲಾಗಿ ಮಮತ ಗಂಡ ಮನೋಹರ ಅವರ ಮನೆಯ ಮುಂದೆ ಮರೆಯಾಗಿ ನಿಂತುಕೊಂಡು ನೋಡಿದಾಗ ಅಲ್ಲಿ ಸಾರ್ವಜನಿಕರು ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿರುವುದು ಕಂಡುಬಂದಿರುತ್ತದೆ. ನಂತರ ಧಾಳಿ ಮಾಡಲು ಪ್ರಯತ್ನಿಸಿದಾಗ ಅಲ್ಲಿದ್ದ ಸಾರ್ವಜನಿಕರು ಹಾಗೂ ಸದರಿ ಮಹಿಳೆ ಓಡಿಹೋಗಿರುತ್ತಾರೆ. ಓಡಿಹೋದ ಆರೋಪಿಯ ಹೆಸರು ವಿಳಾಸ ಕೇಳಲಾಗಿ ಮಮತ ಗಂಡ ಮನೋಹರ, ಬ್ಯಾಡರಹಳ್ಳಿ ಗ್ರಾಮ ಎಂದು ತಿಳಿಯಿತು. ಸದರಿ ಮಮತ ಈಗ ನ್ಯಾಯಾಲಯದ ಮುಂದಿರುವ ಆರೋಪಿಯಾಗಿರುತ್ತಾರೆ.

ನಂತರ ಮಮತ ಅವರ ಮನೆಯ ಮುಂದೆ ಆರೋಪಿ ಬಿಟ್ಟು ಹೋಗಿದ್ದ ಒಂದು ಪಾಸ್ಟಿಕ್ ಚೀಲವನ್ನು ಪಂಚರ ಸಮಕ್ಷಮ ಪರಿಶೀಲಿಸಿದಾಗ ಅದರಲ್ಲಿ 90 ಎಂ.ಎಲ್ ನ ಮದ್ಯ ತುಂಬಿದ 23 ರಾಜಾ ವಿಸ್ಕಿ ಟೆಟ್ರಾ ಪ್ಯಾಕೆಟ್‌ಗಳು ಇದ್ದವು., 90 ಎಂ.ಎಲ್ ನ ಮದ್ಯ ತುಂಬಿದ 5 high wards ಟೆಟ್ರಾ ಪ್ಯಾಕೆಟ್‌ಗಳು ಇದ್ದವು ಹಾಗೂ 330 ಎಂ ಎಲ್ 6 ಕಿಂಗ್ ಫಿಶರ್ ಮದ್ಯ ತುಂಬಿದ ಬಿಯರ್ ಬಾಟಲ್ ಗಳು ಕಂಡು ಬಂದಿರುತ್ತವೆ. ಸ್ಥಳದಲ್ಲಿ ಮದ್ಯ ಮಾರಾಟ ಮಾಡಲು ಯಾವುದೇ ಪರವಾನಿಗೆ ಇರಲಿಲ್ಲ. ಆ ಕಾರಣಕ್ಕಾಗಿ ನಾನು ಅವುಗಳನ್ನು ಪಂಚರ ಸಮಕ್ಷಮ ಪಂಚನಾಮೆ ತಯಾರಿಸಿ ವಶಪಡಿಸಿಕೊಂಡಿರುತ್ತೇನೆ. ಸದರಿ ಮದ್ಯವನ್ನು ಒಂದು ಬಿಳಿ ಚೀಲದಲ್ಲಿ ಹಾಕಿ ಸಿ ಎನ್ ಎಂಬ ಅಕ್ಷರದಿಂದ ಪ್ಯಾಕ್ ಮಾಡಿ ಅರಗು ಸೀಲು ಹಾಕಿರುತ್ತೇನೆ. ಅದರ ಮೇಲೆ ಪಂಚರು ಸಹಿ ಮಾಡಿದ ಚೀಟಿಯನ್ನು ಅಂಟಿಸಿರುತ್ತೇನೆ. ಪಂಚನಾಮೆಯನ್ನು ಸಂಜೆ 5.40 ರಿಂದ 6.30 ಗಂಟೆವರೆಗೆ ಜರುಗಿಸಿ, ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿಸಿ ಪ್ರಿಂಟ್ ತೆಗೆಸಿರುತ್ತೇನೆ. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ

ಹಾಗೂ ಪಂಚರ ಸಹಿ ಪಡೆದಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮದ್ದೆ ಮಾಲನ್ನು ನೋಡಿ ಗುರುತಿಸಿದ್ದು ಅದನ್ನು **ಮು.ಮಾ-1** ಎಂದು ಗುರುತಿಸಲಾಯಿತು. ಸಾಕ್ಷಿಯು ನೋಡಿ ಗುರುತಿಸಿದ ಪಂಚನಾಮೆಯನ್ನು **ನಿಪಿ-3** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-3(ಎ)** ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ಒಂದು ಛಾಯಾಚಿತ್ರವನ್ನು ತೆಗೆದಿರುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಛಾಯಾಚಿತ್ರವನ್ನು **ನಿಪಿ-4** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-4(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ನೋಡಿ ಗುರುತಿಸಿದ ಸಿ ಡಿ ಯನ್ನು **ನಿಪಿ-5** ಎಂದು ಎಂದು ಗುರುತಿಸಲಾಯಿತು. ನಿಪಿ-4 ಕ್ಕೆ ಸಂಬಂಧಿಸಿದಂತೆ ಕಲಂ.65(ಬಿ) ಮಧ್ಯ ಸಾಕ್ಷ್ಯ ಅಧಿನಿಯಮದಡಿಯಲ್ಲಿ ಧೃಢೀಕರಣ ಪತ್ರವನ್ನು ಪಡೆದಿರುತ್ತೇನೆ. ಸದರಿ ಧೃಢೀಕರಣ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು **ನಿಪಿ-6** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-6(ಎ)** ಎಂದು ಗುರುತಿಸಲಾಯಿತು.

ನಂತರ ನಾನು ವಶಪಡಿಸಿಕೊಂಡ ಮುದ್ದೆ ಮಾಲುಗಳನ್ನು ಮತ್ತು ಪಂಚನಾಮೆಯನ್ನು ಠಾಣೆಗೆ ತಂದು ಚಾಸಾ-11 ರವರ ಮುಂದೆ ಹಾಜರುಪಡಿಸಿರುತ್ತಾರೆ.

**ಪಾಟೀ-ಸವಾಲುಃ ಆರೋಪಿ ಪರ ಶ್ರೀ.ಡಿ ಜಿ ವಕೀಲರಿಂದಃ-**

ದಿನಾಂಕಃ22.03.2024 ರಂದು ಭಾತ್ಮಿ ಬಂದ ನಂತರ 5.00 ಗಂಟೆ ಗೆ ಠಾಣೆಯಿಂದ ಹೋಗಿರುತ್ತೇವೆ. ಘಟನಾ ಸ್ಥಳ ನಮ್ಮ ಠಾಣೆಯಿಂದ 6 ಕಿ ಮೀ ದೂರು ಇದ್ದು 10-15 ನಿಮಿಷ ಸಮಯ ಬೇಕಾಗುತ್ತದೆ. ಸದರಿ ದಿನ ನಮ್ಮ ಇಲಾಖಾ ವಾಹನವನ್ನು ಕವಿರಾಜ್ ಎಂಬುವವರು ಚಾಲನೆ ಮಾಡುತ್ತಿದ್ದರು. ನಾವು ಬ್ಯಾಡರಹಳ್ಳಿ ಬಸ್ ನಿಲ್ದಾಣಕ್ಕೆ ಹೋದಾಗ ಸಂಜೆ 5.15 ಆಗಿತ್ತು. ಘಟನಾ ಸ್ಥಳ ಸದರಿ ಬಸ್ ನಿಲ್ದಾಣದಿಂದ 500 ಮೀಟರ್ ದೂರ ಇದೆ. ಚಾಸಾ-2 ಮತ್ತು 3 ರವರು ಬಸ್ ನಿಲ್ದಾಣದಲ್ಲಿ ಇದ್ದರು. ಸದರಿ ಬಸ್ ನಿಲ್ದಾಣದಲ್ಲಿ ಜನಸಂದಣಿ ಇರುತ್ತದೆ ಎಂದರೆ ಸರಿಯಲ್ಲ. ಬಸ್ ನಿಲ್ದಾಣದಿಂದ

ಘಟನಾ ಸ್ಥಳದ ಹತ್ತಿರ ಹೋದಾಗ ಸಂಜೆ 5.30 ಆಗಿತ್ತು. ನ್ಯಾಯಾಲಯದ ಮುಂದೆ ಇರುವ ಮು.ಮಾ–1 ಯಾವ ವರ್ಷ ತಯಾರಾಗಿವೆ ಎಂದು ನಾನು ತಿಳಿದಿರುವುದಿಲ್ಲ. ಬೇರೆ ಪ್ರಕರಣಕ್ಕೆ ಸಂಬಂಧಪಟ್ಟ ಮುದ್ದೆ ಮಾಲುಗಳು ನಮ್ಮ ಠಾಣೆಯಲ್ಲಿರುತ್ತವೆ ಎಂದರೆ ಸರಿ. ಅವುಗಳನ್ನು ಈ ಪ್ರಕರಣಕ್ಕೆ ಅಳವಡಿಸಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಕಾಲದಲ್ಲಿ ಘಟನಾ ಸ್ಥಳದಲ್ಲಿ ಒಟ್ಟು 6 ಜನ ಇದ್ದೆವು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮಹಿಳಾ ಸಿಬ್ಬಂದಿ ಆರೋಪಿಯನ್ನು ಹಿಡಿಯಲು ಪ್ರಯತ್ನಿಸಿದ್ದು, ಆರೋಪಿ ಸಿಕ್ಕಿರುವುದಿಲ್ಲ. ಪಂಚನಾಮೆ ಕಾಲದಲ್ಲಿ ಮಬ್ಬು ಕತ್ತಾಲಾಗಿದ್ದು ಒಬ್ಬರ ಮುಖ ಒಬ್ಬರಿಗೆ ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ಯಾವುದೇ ಪಂಚನಾಮೆ ಜರುಗಿಸಿಲ್ಲ ಹಾಗೂ ಯಾವುದೇ ಮುದ್ದೆ ಮಾಲುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಇಲಾಖಾ ಅಂಕಿ ಅಂಶಗಳಿಗೋಸ್ಕರ ಆರೋಪಿ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಅವರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.